# ಪೇರಲ (ಸೀಬೆ)

ಪೇರಲ ಒಂದು ಸ್ವಾದಿಷಕರವಾದ, ಸಮಶೀತೋಷ್ಣ ವಲಯದ ಹಣನ ಬೆಳೆಯಾಗಿದ್ದು, ನಮ್ಮ ರಾಜ್ಯದಲ್ಲಿ ಬಹಳ ಜನಪಿಯವಾಗುತ್ತಿದ. ಪೇರಲ ಹಣ್ಣನ್ನು ಸಂಸ್ಕರಿಸಿ ಜಾಮ್, ಜೆಲ್ಲಿ ಮತ್ತು ನೆಕ್ಟರ್ ತಯಾರಿಸುತ್ತಾರೆ.

**ಮಣ್ಣು :** ಇದು ಚೆನ್ನಾಗಿ ನೀರು ಬಸಿದು ಹೋಗುವಂತಹ ಯಾವುದೇ ತರಹದ ಮಣ್ಣಿನಲ್ಲಿ ಬೆಳೆಯುತ್ತದೆ. ಕೆಂಪುಗೋಡು ಮಣ್ಣು ಅತೀ ಸೂಕ್ತ.

**ಹವಾಗುಣ ಮತ್ತು ನಾಟಿಕಾಲ :** ಒಣ ಪ್ರದೇಶಗಳಲ್ಲಿ ಈ ಬೆಳೆ ಚೆನ್ನಾಗಿ ಬರುತ್ತದೆ. ಹೆಚ್ಚಾಗಿ ಮಳೆ ಬರುವ ಪ್ರದೇಶದಲ್ಲಿ ಗಿಡದ ಬೆಳವಣಿಗೆ ಉತ್ತಮವಾಗಿದ್ದು ಹಣ್ಣುಗಳು ಕಳಪೆ ಮಟ್ಟದ್ದಾಗಿರುತ್ತವೆ. ಜೂನ್–ಜುಲೈ ತಿಂಗಳುಗಳು ನಾಟಿಗೆ ಯೋಗ್ಯ.

**ತಳಿಗಳು**

**1. ಅಲಹಾಬಾದ್ ಸಪೇದ 2. ಸರ್ದಾರ (ಲಕ್ನೋ –49) 3. ಅರ್ಕಾ ಮೃದುಲ (ಹೈಬ್ರಿಡ್–1)**

**ಬೇಸಾಯ ಕ್ರಮಗಳು**

**ಬೇಸಾಯ ಸಾಮಗ್ರಿಗಳು**

| **1. ಕಸಿ / ಗೂಟಿ ಗಿಡಗಳು** | | **ಪ್ರತಿ ಹೆಕ್ಟೇರಿಗೆ** |
|---|---|---|
| ಅಂತರ | 7.5 ಮೀ. x 7.5 ಮೀ. | 177 |
| | 5 ಮೀ. x 5 ಮೀ. | 400 |

**ರಾಸಾಯನಿಕ ಗೊಬ್ಬರಗಳು: ಪತಿ ಗಿಡಕ್ಕೆ (ಗ್ರಾಂ.)**

| | | |
|---|---|---|
| 4–6 | ಸಾರಜನಕ | 100 |
| | ರಂಜಕ | 40 |
| | ಪೊಟ್ಯಾಷ್ | 75 |
| 7–10 | ಸಾರಜನಕ | 200 |
| | ರಂಜಕ | 80 |
| | ಪೊಟ್ಯಾಷ್ | 150 |
| 11ನೇ ವರ್ಷ | ಸಾರಜನಕ | 300 |
| ಹಾಗೂ ನಂತರ | ರಂಜಕ | 120 |
| | ಪೊಟ್ಯಾಷ್ | 150 |

**ನಾಟಿ ಮಾಡುವುದು :** ಬೆಳೆ ಪ್ರದೇಶವನ್ನು ಚೆನ್ನಾಗಿ ಉಳುಮೆ ಮಾಡಿ ಸಿದ್ಧಪಡಿಸಿ ಮಣ್ಣಿನ ಫಲವತ್ತತೆಗನುಗುಣವಾಗಿ 6–7.5 ಮೀ. ಅಂತರದಲ್ಲಿ 90 x 90 x 90 ಸೆಂ.ಮೀ. ಗಾತ್ರದ ಗುಣಿಗಳನ್ನು ತೆಗೆಯಬೇಕು.

**ಗೊಬ್ಬರ ಹಾಕುವುದು ಮತ್ತು ಅಂತರ ಬೇಸಾಯ :** ಉತ್ತಮ ಇಳುವರಿಗಾಗಿ ಮಳೆಗಾಲಕ್ಕೆ ಪ್ರಾರಂಭದಲ್ಲಿ ಗಿಡಗಳಿಗೆ ಗೊಬ್ಬರಗಳನ್ನು ಒದಗಿಸಿ ಹದಿನೈದು ದಿನಗಳಿಗೊಮ್ಮೆ ನೀರು ಹಾಯಿಸಿ, ಗಿಡಗಳ ಪಾತಿಗಳನ್ನು ಕಳೆಯಿಂದ ಮುಕ್ತವಾಗಿಡಬೇಕು. ನಾಟಿ ಮಾಡಿದ ಮೊದಲ 3–4 ವರ್ಷಗಳ ತನಕ ತರಕಾರಿ ಮತ್ತು ದ್ವಿದಳ ಧಾನ್ಯದ ಬೆಳೆಗಳನ್ನು ಪೇರಲ ತೋಟದಲ್ಲಿ ಅಂತರ ಬೆಳೆಗಳನ್ನಾಗಿ ಬೆಳೆಯಬಹುದು. ಗಿಡಗಳು ಒಂದು ಮೀಟರ್ ಎತ್ತರ ಬೆಳೆಯುವವರೆಗೆ ಕಾಂಡದ ಮೇಲೆ ಯಾವುದೇ ಕವಲುಗಳು ಬೆಳೆಯದಂತೆ ನೋಡಿಕೊಳ್ಳಬೇಕು.

ಕಪ್ಪು ಮಣ್ಣಿನಲ್ಲಿ ಹನಿ ನೀರಾವರಿ ಮೂಲಕ ಪ್ರತಿ ಪೇರಲ ಗಿಡಕ್ಕೆ (ಆರು ವರ್ಷದವರೆಗೆ) ಕ್ರಮವಾಗಿ ಪ್ರತಿ ದಿನ ಮುಂಗಾರಿನಲ್ಲಿ 5 ಲೀಟರ್, ಹಿಂಗಾರಿನಲ್ಲಿ 9 ಲೀಟರ್ ಮತ್ತು ಬೇಸಿಗೆಯಲ್ಲಿ 12 ಲೀಟರ್ ನೀರು ಒದಗಿಸುವುದರಿಂದ ಮೇಲ್ಮೈ ನೀರಾವರಿಗಿಂತ ಶೇ. 28 ರಷ್ಟು ನೀರು ಉಳಿತಾಯ ಆಗಿ ಅಧಿಕ ಇಳುವರಿಯನ್ನು ಪಡೆಯಬಹುದು.

**ಕೊಯ್ಲು ಮತ್ತು ಇಳುವರಿ :** ನಾಟಿ ಮಾಡಿದ 3–4 ವರ್ಷಗಳ ನಂತರ ಪೇರಲ ಗಿಡಗಳು ಇಳುವರಿ ಕೊಡಲು ಪ್ರಾರಂಭಿಸುತ್ತವಾದರೂ, ಆರ್ಥಿಕ ಇಳುವರಿ 5–6 ವರ್ಷಗಳಾದ ಮೇಲೆ ದೊರೆಯುತ್ತದೆ. ಪೇರಲ ಸಾಮಾನ್ಯವಾಗಿ ವರ್ಷದಲ್ಲಿ ಮೂರು ಸಲ ಹೂ ಬಿಡುತ್ತದೆ. ಫೆಬ್ರುವರಿ (ಅಂಬೆಬಹಾರ), ಜೂನ್ (ಮೃಗ್‌ಬಹಾರ) ಮತ್ತು ಅಕ್ಟೋಬರ್ (ಹಸ್ತಬಹಾರ) ತಿಂಗಳುಗಳಲ್ಲಿ ಗಿಡದ ವಯಸ್ಸಿಗನುಗುಣವಾಗಿ ಪ್ರತಿ ಗಿಡದ ಹಣ್ಣಿನ ಇಳುವರಿ ವ್ಯತ್ಯಾಸವಾಗುತ್ತದೆ. ಹತ್ತು ವರ್ಷದ ಗಿಡದಿಂದ ಪ್ರತಿ ವರ್ಷಕ್ಕೆ ಸುಮಾರು 1000 ದಿಂದ 1500 ಹಣ್ಣುಗಳು ದೊರೆಯುತ್ತವೆ. (20–30 ಟನ್ ಪ್ರತಿ ಹೆಕ್ಟೇರಿಗೆ).

**ಸೂಚನ:** ಗೋಮೂತ್ರದಲ್ಲಿ ಪೇರಲ ಹಣ್ಣಿನ ಬೀಜಗಳನ್ನು 24 ಗಂಟೆಗಳವರೆಗೆ ನೆನೆಸುವುದರಿಂದ ಅವುಗಳ ಶೇಕಡಾವಾರು ಮೊಳಕೆ ಪ್ರಮಾಣ, ಸಸಿಗಳ ಎತ್ತರ ಮತ್ತು ಎಲೆಗಳ ಸಂಖ್ಯೆ ಹೆಚ್ಚಾಗುವುದಲ್ಲದೇ, ಮೊಳಕೆಯೊಡೆಯಲು ಕಡಿಮೆ ದಿನಗಳನ್ನು ತೆಗೆದುಕೊಳ್ಳುತ್ತದೆ.